ಸೃಜನಿ
SRUJANI: Indian Journal of Innovative Research and Development (SIJIRD)
Volume-4 Issue 1, March-April 2025, Pp. 143-148
Bi-Monthly, Peer-Reviewed, Open Access, Indexed Journal
I S S N: 2583-3510
SIRDF JOURNALS
editor@srujani.in
www.srujani.in

# ಗುಬ್ಬಿ ತಾಲೂಕಿನ ಜೈನ ಶಾಸನಗಳು

**ಗಿರೀಶ ಹೆಚ್.ಎನ್**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು.

**Abstract:**
*ಭಾರತದಲ್ಲಿ ಜೈನ ಪರಂಪರೆಯೂ ಅತಿ ಪ್ರಾಚೀನವಾದುದು. ಕನ್ನಡ ನಾಡು ಪ್ರಾಚೀನ ಕಾಲದಿಂದ ಜೈನದರ್ಶನದ ವಾಸಸ್ಥಾನ ಮತ್ತು ಅಭಿವೃದ್ಧಿ ಹೊಂದಿದ ಸ್ಥಾನ. ಕರ್ನಾಟಕದಲ್ಲಿ ಜೈನಧರ್ಮವು ಯಾವ ಕಾಲದಿಂದ ಇತ್ತೆಂದು ಆಧಾರ ಸಹಿತ ಹೇಳುವುದು ಕಷ್ಟ. 'ವೈದಿಕ ಧರ್ಮದಿಂದ ಪ್ರತ್ಯೇಕವಾಗಿ ಸ್ವತಂತ್ರ ತಳಹದಿಯ ಮೇಲೆ ಭಾರತದಲ್ಲಿ ತಲೆಯೆತ್ತಿದ ಮೊದಲ ಧರ್ಮವೆಂದರೆ ಜೈನ ಧರ್ಮ. ಇದು ಉತ್ತರ ಭಾರತದಲ್ಲಿ ತಲೆಯೆತ್ತಿದರೂ ದಕ್ಷಿಣ ಭಾರತಕ್ಕೆ ಬಂದು ಕರ್ನಾಟಕದಲ್ಲಿ ಭದ್ರವಾಗಿ ನೆಲೆಯೂರಿತು. ಕ್ರಿ.ಶ.ಪ್ರಾರಂಭದಿಂದ ಹತ್ತು ಹನ್ನೆರಡನೇ ಶತಮಾನಗಳವರೆಗೆ ಕನ್ನಡ ನಾಡಿನ ಸಾಮಾಜಿಕ, ಆರ್ಥಿಕ, ಸಾಹಿತ್ಯಕ ಮತ್ತು ರಾಜಕೀಯ ಜೀವನದ ಮೇಲೆ ಜೈನಧರ್ಮ ಅಚ್ಚಳಿಯದ ಪ್ರಭಾವ ಬೀರಿದೆ. ಕರ್ನಾಟಕದ ಪ್ರಾಚೀನ ಮತ್ತು ಮಹತ್ವಪೂರ್ಣವಾದ ಧರ್ಮ ಜೈನಧರ್ಮ. ಇದರ ಪರಂಪರೆಯು ಉನ್ನತವಾಗಿದ್ದು ರಾಜಕೀಯ, ಧಾರ್ಮಿಕ, ನೈತಿಕ, ಸಾಹಿತ್ಯಕ ಮತ್ತು ಕಲಾ ಕ್ಷೇತ್ರಗಳಲ್ಲಿ ಸದಾ ಸ್ಮರಣೀಯ ಪರಿಣಾಮವನ್ನು ಬೀರಿದೆ. ಪ್ರಸ್ತುತ ಲೇಖನದಲ್ಲಿ ಗುಬ್ಬಿ ತಾಲೂಕಿನ ಜೈನ ಶಾಸನಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.*

**Keywords:** *ಕನ್ನಡ ಸಾಹಿತ್ಯ, ಜೈನಧರ್ಮ, ಜೈನ ಶಾಸನಗಳು, ಗುಬ್ಬಿ.*

**ಪೀಠಿಕೆ**

ಕರ್ನಾಟಕದ ಜೈನಧರ್ಮದ ಇತಿಹಾಸದಲ್ಲಿ ಗಂಗರ ಕಾಲವು ಸ್ಮರಣೀಯವಾದುದು. ನಂತರ ಮಾನ್ಯಖೇಟದ ರಾಷ್ಟ್ರಕೂಟರೂ ಜೈನ ಧರ್ಮಕ್ಕೆ ಉದಾರ ರಾಜಾಶ್ರಯ ನೀಡಿದರು. ಕಲ್ಯಾಣದ ಚಾಳುಕ್ಯರ ಹಾಗೂ ಹಳೇಬೀಡಿನ ಹೊಯ್ಸಳರು ಜೈನ ಧರ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿ ಸ್ಫೂರ್ತಿಯಿಂದಲೇ ಜಿನ ಧರ್ಮದ ಪ್ರಸಾರ ಮಾಡಿದರು. ಮುಂದೆ 14ನೇ ಶತಮಾನದಲ್ಲಿ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯದ ಅರಸರು ಪರಮತ ಸಹಿಷ್ಣುತೆಯನ್ನು ತೋರಿ ಜೈನ ಧರ್ಮಕ್ಕೆ ಆಶ್ರಯ ನೀಡಿದರು

ದಕ್ಷಿಣ ಭಾರತದ ಜೈನಧರ್ಮದ ಇತಿಹಾಸವೆಂದರೆ ಕರ್ನಾಟಕದ ಜೈನಧರ್ಮದ ಇತಿಹಾಸವೇ ಆಗಿದೆ. ಪ್ರಾಚೀನ ಕರ್ನಾಟಕದಲ್ಲಿ ಜೈನಧರ್ಮ ಒಂದು ಪ್ರಬಲ ಧರ್ಮವಾಗಿತ್ತು[1] ಎಂಬ ವಿದ್ವಾಂಸರ ಮಾತು ಸತ್ಯವೆನಿಸುತ್ತದೆ. ಯಾಕೆಂದರೆ ಪ್ರಾರಂಭ ಕಾಲದ ಕನ್ನಡ ಶಾಸನ ಹಾಗೂ ಸಾಹಿತ್ಯವು ಹೆಚ್ಚು ಒಳಗೊಳ್ಳುವುದು ಜೈನಧರ್ಮದ ಹಿನ್ನೆಲೆಯನ್ನೆ. ಜೈನಧರ್ಮವನ್ನು ಹೊರತುಪಡಿಸಿ ಕನ್ನಡ ನಾಡಿನ ಹಾಗೂ ಭಾಷೆಯ ಇತಿಹಾಸವನ್ನು ಅಧ್ಯಯನ ನಡೆಸುವುದು ಅಸಾಧ್ಯವಾಗಿದೆ. ಶಾಸನ ಕವಿಯೊಬ್ಬ

***Please cite this article as:*** ಗಿರೀಶ ಹೆಚ್.ಎನ್. (2025). ಗುಬ್ಬಿ ತಾಲೂಕಿನ ಜೈನ ಶಾಸನಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 4(1), 143–148

ಜೈನಧರ್ಮ ಹಾಗೂ ಕರ್ನಾಟಕದ ಸಂಬಂಧವನ್ನು ಈ ರೀತಿಯಾಗಿ ತಿಳಿಸಿದ್ದಾನೆ,

*ಜಿನಧರ್ಮಾವಾಸಮಾದತ್ತಮಳವಿನಯದಾಗಾರವಾ*
*ದತ್ತು ಪದ್ಮಾ*
*ಸನನಿರ್ಪಾಸದ್ಮಮಾದತ್ತತಿವಿಶದ*
*ಯಶೋಧಾಮಮಾದತ್ತು ವಿದ್ಯಾ*
*ಧನ ಜನ್ಮಸ್ಥಾನ ಮಾದತ್ತಸಮ ತರಳ ಗಂಭೀರ ಸದ್ಗೇಹಮಾದ*
*ತ್ತೆನಿಸಲ್ಕಂತುಳಳನಾನಾಮಹಿಮೆಯೊಳೆಸೆಗುಂ ಚಾರು ಕರ್ನಾಟದೇಶಂ*[2]

ಚೆಲುವಾದ ಕನ್ನಡ ನಾಡು ಅನೇಕ ಮಹಿಮೆಗಳಿಂದ ಕೂಡಿ ಕಂಗೊಳಿಸುತ್ತಿದೆ; ಅದು ಜೈನಧರ್ಮಕ್ಕೆ ಆವಾಸವಾಗಿದೆ. ಅಮಲವಾದ ವಿನಯಕ್ಕೆ ಆಗರವಾಗಿದೆ. ಬ್ರಹ್ಮನಿರುವ ಮನೆಯಾಗಿದೆ. ಕೀರ್ತಿಯ ಮನೆಯಾಗಿದೆ. ವಿದ್ಯೆ ಮತ್ತು ನಿಧಿಗೆ ಜನ್ಮ ಸ್ಥಾನವಾಗಿದೆ. ಹೊಳೆಯುವ ಗಂಭೀರ ಶ್ರೇಷ್ಠ ಗೃಹವಾಗಿದೆ ಎಂದು ಕರ್ನಾಟಕವನ್ನು 'ಕರ್ನಾಟ ದೇಶ'ವೆಂದು ಪರಿಚಯಿಸಿದ್ದಾನೆ.

ಇದಕ್ಕೆ ಸಾಕ್ಷಿಯೆಂಬಂತೆ ಸಾಹಿತ್ಯ ಕೃತಿಗಳು, ವಾಸ್ತುಶಿಲ್ಪ, ಶಾಸನಗಳು ಇತ್ಯಾದಿ ಆಕರಗಳು ಮೂಲಾಧಾರವಾಗಿವೆ. ಕದಂಬ, ಗಂಗ, ರಾಷ್ಟ್ರಕೂಟ, ಚಾಳುಕ್ಯ, ಹೊಯ್ಸಳರು, ವಿಜಯನಗರ ಸಾಮ್ರಾಜ್ಯ ಮುಂತಾದ ರಾಜಮನೆತನಗಳು ಹಾಗೂ ಸಾಂತರರು, ನಗಿರೆ, ಭೈರರಸರು ಮುಂತಾದ ಸಾಮಂತ ಹಾಗೂ ಮಾಂಡಳಿಕ ಅರಸು ಮನೆತನಗಳು ಜೈನಧರ್ಮವನ್ನು ಪೋಷಿಸಿ ಬೆಳೆಸಿವೆ. ಈ ರಾಜಮನೆತನಗಳು ನೀಡಿದ ಕೊಡುಗೆಗಳು ಮುಖ್ಯವಾಗಿ ಶಾಸನಗಳಿಂದ ತಿಳಿದುಬರುತ್ತವೆ. ಜೈನಧರ್ಮದ ಆಚಾರ–ವಿಚಾರ, ದಾನ, ಬಸದಿಗಳು, ಮುನಿಪರಂಪರೆ ಹೀಗೆ ಹಲವಾರು ಅಂಶಗಳು ಶಾಸನಗಳಲ್ಲಿ ಅಡಕವಾಗಿವೆ.

ತುಮಕೂರು ಜಿಲ್ಲೆಯು ಪ್ರಾಚೀನ ಜೈನ ಕೇಂದ್ರಗಳಲ್ಲಿ ಒಂದಾಗಿದೆ. ಜಿಲ್ಲೆಯಲ್ಲಿ ಜೈನಧರ್ಮದ ಬಗ್ಗೆ 35ಕ್ಕೂ ಹೆಚ್ಚು ಶಾಸನಗಳು ದೊರೆತಿವೆ. ಗುಬ್ಬಿ ತಾಲೂಕಿನಲ್ಲಿ ಜೈನ, ಶೈವ ಹಾಗೂ ವೈಷ್ಣವ ಧರ್ಮಗಳ 85ಕ್ಕೂ ಹೆಚ್ಚಿನ ಶಾಸನಗಳು ಲಭ್ಯವಾಗಿವೆ. ಇವುಗಳಲ್ಲಿ ಜೈನಧರ್ಮಕ್ಕೆ ಸಂಬಂಧಪಟ್ಟಂತೆ 12 ಶಾಸನಗಳು ದೊರೆತಿವೆ. ಪ್ರಮುಖವಾಗಿ ಈ ಶಾಸನಗಳು ದಾನ ಮತ್ತು ಸಮಾಧಿ ಮರಣದ ವಿಷಯವನ್ನು ಒಳಗೊಂಡಿದ್ದು, ಈ ಶಾಸನಗಳ ಕುರಿತು ಇಲ್ಲಿ ಚರ್ಚಿಸಲಾಗುವುದು.

**ತ್ಯಾಗಟೂರು ಗ್ರಾಮದ ಶಾಸನ**

ತ್ಯಾಗಟೂರು ಗ್ರಾಮದ ನಿಟ್ಟೂರು–ಚೇಳೂರು ಹೆದ್ದಾರಿಯಲ್ಲಿನ ತಾಲೂಕು ಕಛೇರಿಯ ಪೂರ್ವಭಾಗದಲ್ಲಿ ತಾಮ್ರಪಟವೊಂದು ದೊರೆತಿದೆ. ಇದು ಕ್ರಿ.ಶ. 717ರ ಕಾಲಕ್ಕೆ ಸೇರುವ ಶಾಸನವಾಗಿದೆ. ತಲಕಾಡು ಗಂಗರ ಆಳ್ವಿಕೆಗೆ ಒಳಪಟ್ಟ ಶಾಸನವು ಕೊಂಗುಣಿವರ್ಮನಿಂದ ಒಂದನೆಯ ಶಿವಮಾರನವರೆಗಿನ ವಂಶಾವಳಿಯನ್ನು ವಿವರಿಸುತ್ತದೆ. ಶಿವಮಾರನ ಸಾಮಂತನಾಗಿ ನೀರ್ಗುಂದದ ಅಜ್ಜವರ್ಮ್ಮನೆಂಬುವವನು ಆಳುತ್ತಿದ್ದ. ಇವನ ಮಗಳು ಮಾರೇತಿ. ಇವಳನ್ನು ಅವಿಜಾರನೃಪ ಎಂಬುವವನಿಗೆ ಮದುವೆ ಮಾಡಿ ಕೊಟ್ಟಿದ್ದರು. ಇವಳ ಮಗಳಾದ ಕೊಂಕೇತಿಯನ್ನು ಸಿಂಧರ ರಾಜನಿಗೆ ಮದುವೆ ಮಾಡಿಕೊಡಲಾಗಿತ್ತು. ಕೊಂಕೇತಿಯು ತೇಗಟ್ಟೂರು(ಇಂದಿನ ತ್ಯಾಗಟೂರು) ಗ್ರಾಮದ ನೈರುತ್ಯ ಭಾಗದಲ್ಲಿ ಮುನೀಶ್ವರ ಮುನಿಗಳ ಶಿಷ್ಯರಾದ ಕುಮಾರನಂದಿಗಳಿಗಾಗಿ ಜಿನಾಲಯವನ್ನು ಕಟ್ಟಿಸಿದಳೆಂದು ಶಾಸನವು ತಿಳಿಸುತ್ತದೆ.[3]

ಬಸದಿಗೆ ಶಿವಮಾರನ ಆಜ್ಞೆಯ ಮೇರೆಗೆ ಬಸದಿಯ ಜೀರ್ಣೋದ್ಧಾರ, ತೀರ್ಥಂಕರರ ಪೂಜೆಗೆ ಹಾಗೂ ಮುನಿಗಳ ಆಹಾರದಾನಕ್ಕೆಂದು ಗ್ರಾಮದ ಪೂರ್ವಕ್ಕೆ ದೊಡ್ಡಕೆರೆಯ ಕೆಳಗೆ ಹನ್ನೆರೆಡು ಖಂಡುಗ ಭತ್ತ ಬೆಳೆಯುವ ಭೂಮಿಯನ್ನು ದಾನ ನೀಡಲಾಗಿದೆ. ಶಾಸನವನ್ನು ಗಂಗಾಚಾರ್ಯನೆಂಬುವವನು ಬರೆದಿದ್ದಾನೆ.

**ಕಡಬ ಗ್ರಾಮದ ಶಾಸನ**

ಕ್ರಿ.ಶ. 813ರ ಕಡಬ ಗ್ರಾಮದ ಶಾಸನವು ರಾಷ್ಟ್ರಕೂಟರ 3ನೇ ಗೋವಿಂದನ ಆಳ್ವಿಕೆಯ ಕಾಲದ

ಶಾಸನವಾಗಿದೆ. ಈ ಶಾಸನವು[4] ಚಾಲುಕ್ಯ ಹಾಗೂ ರಾಷ್ಟ್ರಕೂಟರ ಸಂಬಂಧವನ್ನು ತಿಳಿಸುತ್ತದೆ. ಶಾಸನದಲ್ಲಿ ರಾಷ್ಟ್ರಕೂಟರ ಗೋವಿಂದನು ಗಂಗಮಂಡಲದ ಆಡಳಿತವನ್ನು ಚಾಲುಕ್ಯರ ವಿಮಲಾದಿತ್ಯನಿಗೆ ನೀಡಿದ್ದನು. ಈ ವಿಮಲಾದಿತ್ಯನಿಗೆ ಶನಿಕಾಟವು ಬೆನ್ನೇರಿದಾಗ ಅರ್ಕಕೀರ್ತಿ ಎಂಬ ಜೈನ ಮುನಿಯು ಹೋಗಲಾಡಿಸುತ್ತಾರೆ. ಹಾಗಾಗಿ ಮಯೂರಖಂಡಿಯಲ್ಲಿದ್ದ ಚಾಕಿರಾಜನು ಮೂರನೇ ಗೋವಿಂದನಿಗೆ ಬೇಡಿಕೊಳ್ಳುವ ಮೂಲಕ ಜಾಲಮಂಗಲ ಎಂಬ ಗ್ರಾಮವನ್ನು ಶಿಲಾಗ್ರಾಮದ ಅರ್ಕಕೀರ್ತಿ ಜೈನ ಮುನಿಗೆ ದಾನ ನೀಡುತ್ತಾನೆ.

ಶಾಸನದಲ್ಲಿ ಅರ್ಕಕೀರ್ತಿ ಮುನಿಸಂಘದ ಬಗ್ಗೆ ದಾಖಲಿಸಿದೆ. ಇವರ ಮುನಿವೃಂದದಲ್ಲಿ ಆಚಾರ್ಯರಾದ ಕೂರ್ಚಿಆಚಾರ್ಯರಿದ್ದರು. ಇವರ ವೃಂದವು ಯಾಪನೀಯ ಸಂಘದ ಪುನ್ನಾಗ ಗಚ್ಚದ ಮೂಲಗಣದ ಕೀರ್ತ್ಯಚಾರ್ಯನ ಅನ್ವಯಕ್ಕೆ ಸೇರಿದ್ದು ಅಪಾರವಾದ ವ್ರತ, ಆಚರಣೆಯ ಮೂಲಕ ಪವಿತ್ರರಾಗಿದ್ದರು. ಕೂರ್ಚಿ ಆಚಾರ್ಯರ ಶಿಷ್ಯ ವಿಜಯಕೀರ್ತಿ ಹಾಗೂ ಇವರ ಶಿಷ್ಯ ಅರ್ಕಕೀರ್ತಿ ಆಗಿದ್ದರು. ಹಾಗೆಯೇ ಶಾಸನದಲ್ಲಿ ದಾನದ ಸೀಮೆಯನ್ನು ಸಹ ನೀಡಲಾಗಿದೆ. ಈ ಶಾಸನದಿಂದ 9ನೇ ಶತಮಾನದ ವೇಳೆಗೆ ಯಾಪನೀಯ ಸಂಘವು ಈ ಭಾಗದಲ್ಲಿ ಪ್ರಭಾವವನ್ನು ಬೀರಿತ್ತು ಎಂದು ತಿಳಿದುಬರುತ್ತದೆ.

**ಬಿದಿರೆ ಗ್ರಾಮದ ಶಾಸನ**

ಬಿದಿರೆ ಗ್ರಾಮದ ಕ್ರಿ.ಶ. 979ರ ಶಾಸನವು ಪ್ರಸ್ತುತವಾಗಿ ಲಭ್ಯವಿಲ್ಲ. ಆದರೇ ಈ ಶಾಸನದಲ್ಲಿ **'ತ್ರಿಲೋಕಚನ್ದ್ರ ಭಟಾರರ ಶಿಷ್ಯ ರವಿಚನ್ದ್ರಭಟಾರರ್ ಸಂನ್ಯಸನಂ ಗೆಯ್ದು ಮುಡಿಪಿದರ್'**[5] ಎಂದಿದೆ. ಈ ಮೂಲಕ ಪ್ರಮಾತಿ ಸಂವತ್ಸರದ ಕಾರ್ತಿಕ ಮಾಸದಂದು ತ್ರಿಲೋಕಚಂದ್ರ ಭಟಾರರ ಶಿಷ್ಯನಾದ ರವಿಚಂದ್ರ ಭಟಾರರು ಸಮಾಧಿವಿಧಿ ಮೂಲಕ ಮುಡಿಪಿದರೆಂದು ತಿಳಿಯುತ್ತದೆ. ಇವರ ಮರಣದ ನಂತರ ದೇಸೀಗಣದ ಕೊಂಡಕುಂದಾನ್ವಯದ ಧನುಕೀರ್ತಿ ಭಟಾರರು ಇವರಿಗೆ ಪರೋಕ್ಷ ವಿನಯವಾಗಿ ಶಾಸನವನ್ನು ಮಾಡಿಸಿದರೆಂದು ದಾಖಲಾಗಿದೆ.

**ನಿಟ್ಟೂರು ಗ್ರಾಮದ ಶಾಸನಗಳು**

ನಿಟ್ಟೂರಿನ ಶಾಂತಿನಾಥ ಬಸದಿಯಲ್ಲಿ 8 ಶಾಸನಗಳು ಲಭ್ಯವಾಗಿವೆ. ಈ ಮೂಲಕ ಗ್ರಾಮವು ಪ್ರಮುಖ ಜೈನರ ಕೇಂದ್ರವಾಗಿದೆ. ಈ ಬಸದಿಯಲ್ಲಿನ ಕ್ರಿ.ಶ. 1200ರ ಶಾಸನವು ಮಾಳವೆ ಹಾಗೂ ಚೌಡಿಯಕ್ಕ ಎಂಬ ಅತ್ತೆ–ಸೊಸೆಯರ ಸಮಾಧಿಮರಣದ ವಿಷಯವನ್ನು ದಾಖಲಿಸುತ್ತದೆ.[6] ಮಾಳವೆಯು ಬಾಳಚಂದ್ರ ಪಂಡಿತದೇವರ ಶಿಷ್ಯೆಯಾಗಿದ್ದಳು. ಈಕೆಯು 'ವಿನಯ ನಿಧಿ', 'ಅನುಪಮ ಗುಣಮಂತೆ' ಎಂದು ಕೀರ್ತಿಯನ್ನು ಪಡೆದವಳಾಗಿದ್ದಳು. ಅಪಾರ ಜಿನಭಕ್ತಿಯನ್ನು ಹೊಂದಿದ್ದ ಬಾಮಿಸೆಟ್ಟಿಯು ಈಕೆಯ ಗಂಡ. ಮಾಳವೆಯ ಮಗ ಮಲ್ಲಿಸೆಟ್ಟಿ ಹಾಗೂ ಸೊಸೆ ಚೌಡಲೆ. ಇವರಿಗೆ ಪದ್ಮಲೆ ಹಾಗೂ ಮಲ್ಲಮ ಎಂಬ ಮಕ್ಕಳಿದ್ದರು. ಯಮನು ಚೌಡಲೆಯನ್ನು ಕರೆದೊಯ್ಯಲು ಮಾಳವೆಯು ಸಮಾಧಿವಿಧಿಯನ್ನು ಸ್ವೀಕರಿಸಿ ಮುಡಿಪಿದಳು.

ಮಾಳವೆಯ ಗುರುಗಳಾದ ಬಾಳಚಂದ್ರಪಂಡಿತದೇವರು ಮೂಲಸಂಘ, ದೇಸೀಗಣ ಪುಸ್ತಕಗಚ್ಚದ ಕೊಂಡಕುಂದಾನ್ವಯಕ್ಕೆ ಸೇರಿದ ಅಭಯಚಂದ್ರ ಸಿದ್ಧಾಂತಿಗಳ ಶಿಷ್ಯರಾಗಿದ್ದರು. ಇವರಿಗೆ 'ಆಗಮಾಂಬುನಿಧಿ' ಎಂಬ ಬಿರುದಿತ್ತು. ಅತ್ತೆ ಸೊಸೆ ಇಬ್ಬರ ಅನ್ಯೋನ್ಯತೆಯನ್ನು ತಿಳಿಸುವ ಈ ಶಾಸನವು ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಶಾಸನದಲ್ಲಿ ಇವರಿಬ್ಬರ ಸಮಾಧಿಮರಣವನ್ನು ತಿಳಿಸುವ ಕಂದ ಪದ್ಯವು ಈ ರೀತಿಯಾಗಿದೆ,

*ಮುಳಿದು ಜವಂ ಮಾಳವೆಯುಮ*
*ನುಳಿಹದೆ ಸೊಸೆ ಚೌಡಿಯಕ್ಕನಂ ಮಡಿಪಲು ಶ್ರೀ*
*ಕುಳ ಸಾಹಸ ಷಡ್ಗುಣದೊಂ*
*ದಳವ ಸಮಾಧಿಯೊಳೆ ಮೆಱೆದು ಮುಡಿಪಿದರಲುತೇ॥*

ಬಸದಿಯಲ್ಲಿನ ಉತ್ತರದ ಕಡೆ ನೆಟ್ಟ ಕಲ್ಲಿನ ಎಡಭಾಗದ ಸುಮಾರು ಕ್ರಿ.ಶ. 1200ರ ಶಾಸನವೊಂದು ಮಾಳವ್ವೆಯ ಮಗನಾದ ಬಾಮಿಸೆಟ್ಟಿಯ ಹೆಂಡತಿಯಾದ ಬೂಚವ್ವೆಯು ನಿಸಿಧಿಯಾದಳೆಂದು ತಿಳಿಸುತ್ತದೆ.[7] ನಿಟ್ಟೂರಿನ ಇದೇ ಶಾಸನದ ಬಲಭಾಗದಲ್ಲಿನ ಶಾಸನವು **'ಮಲ್ಲಿಸೆಟ್ಟಿಯುಂ ಆತನ ಪ್ರಿಯ ಪುತ್ರ ಮಾಳೆಯ್ಯನು ಮೆಂದಿರ್ಬ್ಬರ ನಿಶಿಧಿ'**[8] ಎಂದು ಮಲ್ಲಿಸೆಟ್ಟಿ ಹಾಗೂ ಅವನ ಮಗ ಮಾಳೆಯ್ಯನು ನಿಸಿದಿಯಾದರೆಂದು ತಿಳಿಸುತ್ತದೆ. ಮಲ್ಲಿಸೆಟ್ಟಿಯು 'ಗುಣದ ಬೆಡಂಗ' ಎಂದು ಹೆಸರು ಪಡೆದಿದ್ದನು. ಮಾಳೆಯ್ಯನ ಸಹೋದರಿ ಮಾಳವ್ವೆ ಎಂದು ಶಾಸನದಲ್ಲಿ ಉಲ್ಲೇಖವಾಗಿದೆ.

ಬಸದಿಯ ನವರಂಗದ ಬಾಗಿಲುವಾಡದ ಮೇಲಿರುವ 12ನೇ ಶತಮಾನದ ಶಾಸನದಲ್ಲಿ **'ಈ ಲೇಖೆಯ ಪ್ರತುಮೆಯ ಕಂಡರಿಸಿದ ಮಾಳೆವೆಯ ಮಲೆಯ'** ಎಂಬ ಉಲ್ಲೇಖವು ಮಾಳೆವೆಯು ಶಾಸನವನ್ನು ಕಂಡರಿಸದನೆಂದು ತಿಳಿಸುತ್ತದೆ.[9] ಬಸದಿಯ ಹಿಂದಿರುವ ವಿಗ್ರಹದ ಕಲ್ಲಿನಲ್ಲಿ 13ನೇ ಶತಮಾನದ ನಿಸಿದಿ ಶಾಸನವಿದೆ. ಈ ಶಾಸನವು[10] ಬೊಮ್ಮಣ್ಣ ಎಂಬುವವನು ಚಿತ್ರಭಾನು ಸಂವತ್ಸರದ ಪಾಲ್ಗುಣದ ಶುದ್ಧ 8, ಸೋಮವಾರದಂದು ಸ್ವರ್ಗ್ಗಾಸ್ಥನಾದನೆಂದು ದಾಖಲಿಸುತ್ತದೆ.

ಬಸದಿಯ ಪಶ್ಚಿಮಕ್ಕೆ ನಿಲ್ಲಿಸಿದ ಗೋಡೆಯಲ್ಲಿನ ಶಾಸನವು ಕ್ರಿ.ಶ. 1219ರ ಕಾಲದ ಶಾಸನವಾಗಿದೆ. ಈ ಶಾಸನದಲ್ಲಿ ಮಲ್ಲಿಸೆಟ್ಟಿ ಎಂಬುವವನು ಆದೀಶ್ವರ ಬಸದಿಯ ಹೊರಗಿನ ಭಿತ್ತಿಯ ಸುತ್ತಲೂ ಪ್ರತಿಮೆಗಳನ್ನು ಮಾಡಿಸಿದನೆಂದು ತಿಳಿಸುತ್ತದೆ.[11]

ಮಲ್ಲಿಸೆಟ್ಟಿಯು ಮಾಳವೆ ಹಾಗೂ ಸೆಟ್ಟಿಕಬ್ಬೆಯರ ಮಗನಾಗಿದ್ದನು. ಮಾಳವೆಯನ್ನು 'ಜೈನಾಂಬಿಕೆ ಎಂಬ ಹೆಸರಿನಿಂದ ಕರೆಯಲಾಗಿದ್ದು, ಇವಳು ಮೂಲಸಂಘ ದೇಸೀಗಣ ಪೊ(ಪು)ಸ್ತಕಗಚ್ಚ ಕೊಂಡಕುಂದಾನ್ವಯಕ್ಕೆ ಸೇರಿದ ಶ್ರೀ ಪದ್ಮಪ್ರಭ ಮಲಧಾರಿದೇವರ ಶಿಷ್ಯೆಯಾಗಿದ್ದಳು. ಪ್ರಸ್ತುತವಾಗಿ ಬಸದಿಯು ಜೀರ್ಣೋದ್ಧಾರಗೊಳ್ಳುತ್ತಿದ್ದು ಮಲ್ಲಿಸೆಟ್ಟಿಯು ಕೆತ್ತಿಸಿದ ಕೆಲವು ಪ್ರತಿಮೆಗಳು ಬಸದಿಯ ಭಿತ್ತಿಗಳ ಮೇಲೆ ಇಂದಿಗೂ ಕಂಡುಬರುತ್ತವೆ.

ಬಸದಿಯ ಪದ್ಮಾವತಿದೇವಿಯ ಹಿತ್ತಾಳೆ ವಿಗ್ರಹದ ಪೀಠದಲ್ಲಿನ ಕ್ರಿ.ಶ. 1272ರ ಕಾಲದ ಶಾಸನವು **'ಬಿದುರೆಯಸೆಟ್ಟಿ ಮೆಯಂದಸೆಟಿಯ ಮಗ ಸೇನಾಪತಿ ಕುಟುಂಬದ ಸೆಟಿ ಪದುಮಸೆಟಿಯ ಪಟಣಗೆರೆಯ ಪದ್ಮಾವತಿ ಅಮ್ಮನಿಗೆ ಪದ್ಮಪೀಠದ ಧರ್ಮ್ಮ'**[12] ಎಂದು ಉಲ್ಲೇಖಿಸಿದೆ. ಈ ಮೂಲಕ ಬಿದುರೆ(ಬಿದಿರೆ) ಗ್ರಾಮದ ಮೆಯಂದಸೆಟ್ಟಿಯ ಮಗ ಪದುಮಸೆಟಿಯು ಪದ್ಮಾವತಿ ದೇವಿಗೆ ಪದ್ಮಪೀಠವನ್ನು ಮಾಡಿಸಿದನೆಂದು ತಿಳಿಸುತ್ತದೆ. ಶಾಸನವು ಬಿದುರೆ ಅಂದರೆ ಇಂದಿನ ಬಿದಿರೆ ಗ್ರಾಮ ಹಾಗೂ ಪಟಣಗೆರೆಯ ಗ್ರಾಮಗಳಲ್ಲಿ ಜೈನಧರ್ಮದ ಅಸ್ತಿತ್ವವನ್ನು ಸೂಚಿಸುತ್ತದೆ.

ಬಸದಿಯ ಪ್ರಾಕಾರದಲ್ಲಿ ಬಿದ್ದಿರುವ ಕ್ರಿ.ಶ. 14ನೇ ಶತಮಾನದ ಶಾಸನವು[13] ರೌದ್ರಿ ಸಂವತ್ಸರದ ಆಷಾಢದಂದು ನಿವಹಸೆಟಿ ಎಂಬುವವನು ನಿಸಿದಿಯಾದನೆಂದು ದಾಖಲಿಸುತ್ತದೆ. ಶಾಸನದಲ್ಲಿ ತಿಥಿಯ ಕಾಲ ಉಲ್ಲೇಖವಾಗಿಲ್ಲ ಆದರೇ ಶಾಸನ ಲಿಪಿಯಿಂದ ಇದು 14ನೇ ಶತಮಾನದ ಶಾಸನವೆಂದು ತಿಳಿದುಬರುತ್ತದೆ.

**ಇಡಗೂರು ಗ್ರಾಮದ ಶಾಸನ**

ಇಡಗೂರಿನ ಆಂಜನೇಯ ದೇವಾಲಯದಲ್ಲಿನ ನಿಸಿದಿ ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ, ವಿದ್ವಾಂಸರ ಪ್ರಕಾರ 14–15ನೇ ಶತಮಾನದ ಶಾಸನವೆಂದು ತಿಳಿಸಿದ್ದಾರೆ. ಈ ಶಾಸನದಲ್ಲಿ ಶಾಂತಿದೇವರ ಶಿಷ್ಯನೊಬ್ಬನು ನಿಸಿದಿಯಾದನೆಂದು ತಿಳಿಸುತ್ತದೆ.[14] ಶಾಸನದ ಸಾಕಷ್ಟು ಭಾಗ ತ್ರುಟಿತವಾದ ಕಾರಣ ನಿಸಿದಿಯಾದವರ ಹೆಸರು ಹಾಗೂ ಮಾಹಿತಿ ಲಭ್ಯವಿಲ್ಲ.

ತುಮಕೂರು ಜಿಲ್ಲೆಯ ಜೈನಧರ್ಮದ ಇತಿಹಾಸಕ್ಕೆ ಗುಬ್ಬಿ ತಾಲೂಕಿನ ಶಾಸನಗಳು ಮಹತ್ವಪೂರ್ಣವಾದ ಕೊಡುಗೆಗಳನ್ನು ನೀಡಿವೆ. 8ನೇ ಶತಮಾನದಿಂದ

15ನೇ ಶತಮಾನದ ಈ ಶಾಸನಗಳು ಜೈನಧರ್ಮದ ಆಚಾರ–ವಿಚಾರವನ್ನು ಒಳಗೊಂಡಿವೆ. ತಾಲೂಕಿನ ನಿಟ್ಟೂರು ಗ್ರಾಮವು ಜೈನರ ಪ್ರಮುಖ ಕೇಂದ್ರವಾಗಿದೆ. ಗುಬ್ಬಿ ತಾಲೂಕಿನಲ್ಲಿ 12 ಜೈನ ಶಾಸನಗಳು ಮಾತ್ರ ಲಭ್ಯವಾಗಿದ್ದು, ಈ ಕ್ಷೇತ್ರದಲ್ಲಿ ಇನ್ನಷ್ಟೂ ಅಧ್ಯಯನ ನಡೆಸುವ ಅಗತ್ಯತೆ ಇದೆ.

**ಗುಬ್ಬಿ ತಾಲ್ಲೂಕಿನ ಪ್ರಮುಖ ಜೈನ ಶಾಸನಗಳ ಪಠ್ಯಗಳು**

**ಬಿದಿರೆಯ ನಿಸಿದಿ ಶಾಸನ**

*ಸ್ವಸ್ತಿ ಸಕವ*
*ರ್ಷ 901 ನೆಯ ಪ್ರ*
*ಮಾತಿಕ ಸಂವತ್ಸ*
*ರದ ಕಾರ್ತಿಕಮಾಸ*
*ದೊಳ್ ತ್ರಿಳೋಕಚನ್ದ್ರ*
*ಭಟಾರರ ಸಿಷ್ಯ*
*ರವಿಚನ್ದ್ರಭಟಾ*
*ರರ್ ಸಂನ್ಯಸನಂ*
*ಗೆಯ್ದು ಮುಡಿಪಿ*
*ದರ್। ಕೊಣ್ಡಕುನ್ದಾನ್ವ*
*ಯದ ದೇಸಿಗಗಣದ*
*ಧನುಕೀರ್ತಿಭಟಾರರ್*
*ಪರೋಕ್ಷವಿನಯಂ ಮಾ*
*ಡಿಸಿದರ್*

*(ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ–24, ಗುಬ್ಬಿ 61)*

**ನಿಟ್ಟೂರಿನ ಶಾಂತಿನಾಥ ಬಸದಿಯ ಉತ್ತರದ ಕಡೆ ಗೋಡೆಗೆ ನೆಟ್ಟ ನಿಸಿದಿ ಶಾಸನ**

*ಶ್ರೀಮೂಲಸಂಘ ದೇಶಿಯಗಣ ಪುಸ್ತಕ*
*ಗಚ್ಚ ಕೊಂಡಕುಂದಾನ್ವಯದ*
*ಶ್ರೀ ಯಭಯಚಂದ್ರ ಸೈದ್ಧಾಂತಿಕಚಕ್ರವರ್ತಿಗ*
*ಳಪ್ರಿಯ ಶಿಷ್ಯರಾಗಮಾಂಬುನಿಧಿಗಳುಂ ಸಕಳಗುಣಾಕಳಿ*
*ತರುಮಪ್ಪ ಬಾಳಚಂದ್ರಪಂಡಿತದೇವರ ಪ್ರಿಯ ಗುಡ್ಡಿ*
*ಯರು॥ ವಿನಯನಿಧಿ ಮಾಳಿಯಕ್ಕಂ ಅನುಪಮಗು*
*ಖಿಮಂತೆ ಬಾಮಿಸೆಟ್ಟಿಗಳಂ ತಾಂ। ಜಿನಭಕ್ತಿಯಿಂದೆ ಪ*
*ಡೆದಳು ಜಿನಭಕ್ತರ್ಪ್ಪಡೆವ ಪಡಪು ಪೊಗಳಲಗುಂಬಂ*
*॥ ಶೀಳಾನ್ವಿತೆ ಚೌಡಲೆಗಂ ಮಾಳವೆಯ ತನೂಜ ಮ*
*ಲ್ಲಿಸೆಟ್ಟಿಗೆ ಸುತೆಯಾ। ಬ್ಯಾಳಗಜಗಮನೆ ಪದ್ಮಲೆ ಬಾಳ*
*ಕ ಮಾಣಿಕ್ಯ ಮಲ್ಲಮಾಳಾತ್ಮಜರುಂ॥ ಮುಳಿದು ಜವಂ*
*ಮಾಳವೆಯುಮನುಳಿಹದೆ ಸೊಸೆ ಚೌಡಿಯಕ್ಕನಂ*
*ಮಡಿಪಲು ಸ್ತ್ರೀಕುಳ ಸಾಹಸ ಷಡ್ಗುಣದೊಂದಳವ*
*ಸಮಾಧಿಯೊಳ್ ಮೆಱೆದು ಮುಡಿಪಿದರಲುತೇ॥*
*ಮಾಳವ್ವೆಯುಂ ಚೌಡಿಯಕ್ಕನುಮೆಂಬಿರ್ಬ್ಬರ*
*ನಿಶಿಧಿ॥*

*(ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ–24, ಗುಬ್ಬಿ 45)*

**ನಿಟ್ಟೂರಿನ ಶಾಂತಿನಾಥ ಬಸದಿಯ ಪಶ್ಚಿಮದ ಕಡೆ ಗೋಡೆಗೆ ನೆಟ್ಟ ದಾನ ಶಾಸನ**

*ಸ್ವಸ್ತಿ ಶ್ರೀ ಮೂಲಸಂಗ ದೇಶೀಗಣ ಪೊಸ್ತಕಗಚ್ಚ*
*ಶ್ರೀಕೊಂಡಕುಂದಾನ್ವಯದ ಶ್ರೀ ಪದ್ಮ*
*ಪ್ರಭಮಲಧಾರಿದೇವರ ಗುಡ್ಡಿ ಜೈನಾಂಬಿಕೆ*
*ಯೆನಿಸಿದ ಮಾಳೆವೆ ಸೆಟ್ಟಿಕಬ್ಬೆಯರ ಮ*
*ಗ ಮಲ್ಲಿಸೆಟ್ಟಿ ಈ ಚೈತ್ಯಾಲಯದ ಹೊಱ*
*ಭಿತ್ತಿಯ ಸುತ್ತಣ ಪ್ರತಿಮೆಯಂ ಪ್ರ*
*ಮಾಧಿ ಸಂವತ್ಸರದ ಜೇಷ್ಠ ಸುದ್ಧ ಪಂಚ*
*ಮಿ ಯೊ . . . . . . . . . . . ಕ್ಷಣವಾಗಿ ಮಾ*
*ಡಿದ . . . . . . ಮಹಾಶ್ರೀ*

*(ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ–24, ಗುಬ್ಬಿ 48)*

**ನಿಟ್ಟೂರಿನ ಶಾಂತಿನಾಥ ಬಸದಿಯ ಮುಂದೆ ನಿಲ್ಲಿಸಿರುವ ನಿಸಿದಿ ಶಾಸನ**

*ಮಾಳವ್ವೆಯ*
*ಮಲ್ಲಿಸೆಟ್ಟಿ*
*ಯ ತಂದೆ ಗು*
*ಣದ ಬೆಡಂಗ*
*ಮಲ್ಲಿಸೆಟ್ಟಿಯುಂ*
*ಆತನ ಪ್ರಿ*
*ಯ ಪುತ್ರ ಮಾ*
*ಳೆಯ್ಯನು*
*ಮೆಂದಿರ್ಬ್ಬ*
*ರ ನಿಶಿಧಿ॥*

*(ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ–24, ಗುಬ್ಬಿ 47)*

**ನಿಟ್ಟೂರಿನ ಶಾಂತಿನಾಥ ಬಸದಿಯಲ್ಲಿನ ಹಿತ್ತಾಳೆಯ ಪದ್ಮಾವತಿದೇವಿ ವಿಗ್ರಹದ ಪೀಠದ ಮೇಲಿನ ಶಾಸನ**

*ಆಂಗಿರಸ ಸಂವತ್ಸರದ ಕಾರ್ತಿಕ ಶು 3 ಲು ಬಿದುರೆಯಸೆಟ್ಟಿ ಮೆಯಂದಸೆಟಿಯ ಮಗ ಸೇನಾಪ ತಿ ಕುಟುಂಬದ ಸೆಟಿ ಪದುಮಣಸೆಟಿಯ ಪಟಣಗೆರೆಯ ಪದ್ಮಾವತಿ ಅಮ್ಮನಿಗೆ ಪದ್ಮಪೀಠದ ಧರ್ಮ*

*(ಕರ್ನಾಟಕ ಜೈನಶಾಸನಗಳು ಸಂಪುಟ-2, ಗುಬ್ಬಿ 228)*

ಒಟ್ಟಾರೆ ಜೈನಧರ್ಮ ಮತ್ತು ಜೈನಧರ್ಮದ ಸಮಾಜದ ಸಂಘಟನೆ, ಸಾಂಘಿಕ–ಸಾಂಸ್ಥಿಕ ಸ್ವರೂಪವನ್ನು ಕೊಡುವುದರಲ್ಲಿ ಪ್ರಮುಖ ಪಾತ್ರ ವಹಿಸಿವೆ. ರಾಜರುಗಳು, ಮಾಂಡಲಿಕರು, ವರ್ತಕರು ಇತ್ಯಾದಿ ಧರ್ಮಾನುಸಕ್ತರಿಂದ ಪ್ರಾಮುಖ್ಯತೆ ಪಡೆದಿದ್ದ ಜೈನ ಧರ್ಮವು ಆಶ್ರಯದ ಕೊರತೆಯಿಂದ ಪಾಳುಬಿದ್ದ ಅವಶೇಷಗಳ ಪಳೆಯುಳಿಕೆಗಳಾಗಿವೆ. ಈ ಅವಶೇಷಗಳನ್ನು ರಕ್ಷಿಸಿ ಕಾಪಾಡುವ ಹೊಣೆ ಕನ್ನಡಿಗರೆಲ್ಲದ್ದಾಗಿದೆ.

**ಕೊನೆಟಿಪ್ಪಣಿಗಳು**

1. ಚಿದಾನಂದಮೂರ್ತಿ, ಎಂ. *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಪುಟ.73
2. ನರಸಿಂಹಾಚಾರ್ಯ, ಆರ್. *ಶಾಸನ ಪದ್ಯ ಮಂಜರಿ.* ಪುಟ. 250
3. ಕರ್ನಾಟಕ ಜೈನಶಾಸನಗಳು ಸಂಪುಟ–5, ಗುಬ್ಬಿ 276, ಪುಟ. 400
4. ಎ.ಕ. 24, ಗುಬ್ಬಿ–16, ಪುಟ. 270
5. ಎ.ಕ. 24, ಗುಬ್ಬಿ–61, ಪುಟ. 325
6. ಎ.ಕ. 24, ಗುಬ್ಬಿ–45, ಪುಟ. 313
7. ಎ.ಕ. 24, ಗುಬ್ಬಿ–46, ಪುಟ. 314
8. ಎ.ಕ. 24, ಗುಬ್ಬಿ–47, ಪುಟ. 314
9. ಎ.ಕ. 24, ಗುಬ್ಬಿ–51, ಪುಟ. 317
10. ಕರ್ನಾಟಕ ಜೈನಶಾಸನಗಳು ಸಂಪುಟ–2, ಗುಬ್ಬಿ 230, ಪುಟ. 300
11. ಎ.ಕ. 24, ಗುಬ್ಬಿ–48, ಪುಟ.315
12. ಕರ್ನಾಟಕ ಜೈನಶಾಸನಗಳು ಸಂಪುಟ–2, ಗುಬ್ಬಿ 228, ಪುಟ. 299
13. ಕರ್ನಾಟಕ ಜೈನಶಾಸನಗಳು ಸಂಪುಟ–2, ಗುಬ್ಬಿ 229, ಪುಟ. 299
14. ಎ.ಕ. 24, ಗುಬ್ಬಿ 73, ಪುಟ. 337

**ಪರಾಮರ್ಶನ ಗ್ರಂಥಗಳು**


- ಚಿದಾನಂದಮೂರ್ತಿ, ಎಂ. (2021). *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಸಪ್ನ ಬುಕ್‌ಹೌಸ್.
- ದೇವರಕೊಂಡಾರೆಡ್ಡಿ (ಸಂ.). (2019). *ಕರ್ನಾಟಕ ಜೈನಶಾಸನಗಳು ಸಂಪುಟ–2.* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.
- ದೇವರಕೊಂಡಾರೆಡ್ಡಿ (ಸಂ.). (2020). *ಕರ್ನಾಟಕ ಜೈನಶಾಸನಗಳು ಸಂಪುಟ–5.* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.
- ಮಿರ್ಜಿ ಅಣ್ಣಾರಾಯ. (1997). *ಜೈನಧರ್ಮ.* ಶಾಂತಿ ಸೇವಾ ಸದನ.
- ನರಸಿಂಹಾಚಾರ್ಯ, ಆರ್. (2020). *ಶಾಸನ ಪದ್ಯ ಮಂಜರಿ.* ತನುಮನ ಪ್ರಕಾಶನ.
- ಶ್ರೀನಿವಾಸ ರಿತ್ತಿ. (2009). *ಎಪಿಗ್ರಾಫಿಯಾ ಕರ್ನಾಟಿಕ.* ಸಂಪುಟ–24, ಮೈಸೂರು ವಿಶ್ವವಿದ್ಯಾನಿಲಯ.